ಒ.ಎಸ್.ನಂ. 321/14

ಡಿ. ಡಬ್ಲ್ಯೂ-1

**ದಿನಾಂಕಃ 04.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ವಕೀಲರಿಂದಃ-**

ನನ್ನ ತಂದೆ ಹೆಸರು ಬೋರೆಗೌಡ ಅವರ ತಂದೆ ಹೆಸರು ಕರೀಗೌಡ. ತಕರಾರು ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ವಾದಿ ಸರ್ವೆ ನಂ 5, 3 ಎಕರೆ ಗೆ ದಾವೆ ಹೂಡಿರುತ್ತಾರೆ. ವಾದಿ ಕೊಟ್ಟಿರುವ ಚೆಕ್ಕು ಬಂದಿ ತಿಳಿದುಕೊಂಡಿರುತ್ತೇನೆ, ಪೂರ್ವಕ್ಕೆ ಮರಿಲಕ್ಕೇಗೌಡ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ರಾಮೇಗೌಡ ಎಂದು ವಾದಿ ಚೆಕ್ಕು ಬಂದಿ ಕೊಟ್ಟಿರುತ್ತಾರೆ. ವಾದಿ ಆ ರೀತಿ ಚೆಕ್ಕು ಬಂದಿ ಕೊಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 5 ರ ಪಹಣಿ ನನ್ನ ಹೆಸರಿನಲ್ಲಿ ಇರುವುದಿಲ್ಲ. ಸದರಿ ಸರ್ವೆ ನಂ ನಲ್ಲಿ ನಮಗೆ 3 ಎಕರೆ ಮಂಜೂರು ಆಗಿರುತ್ತದೆ. 3 ಎಕರೆಗೆ ಸಂಬಂಧಿಸಿದಂತೆ ಸಾಗುವಳಿ ಚೀಟಿ ಹಾಜರುಪಡಿಸಿರುತ್ತೇನೆ. ಸರ್ವೆ ನಂ 6 ರಲ್ಲಿ 2 ಎಕರೆ ನನ್ನ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ 5 ರಲ್ಲಿ ನನಗೆ ಮಂಜೂರು ಆಗಿರುವುದಿಲ್ಲ. LRF 80/75-76 ರಂತೆ ನನ್ನ ತಾತನ ಹೆಸರಿಗೆ ಮಂಜೂರು ಆಗಿರುತ್ತದೆ. ಸದರಿ LRF ನಲ್ಲಿ ನಮಗೆ ಯಾವುದೇ ಜಮೀನು ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ಸದರಿ LRF ಸರ್ವೆ ನಂ 5 ಕ್ಕೆ ಸಂಬಂಧಪಟ್ಟಂತೆ ಆಗಿರುತ್ತದೆ. ಸರ್ವೆ ನಂ 17 ಕ್ಕೆ ಸಂಬಂಧಪಟ್ಟಂತೆ LRF 150/75-76 ರಂತೆ ನನ್ನ ತಂದೆಗೆ ಮಂಜೂರು ಆಗಿರುತ್ತದೆ. ಯಾವ ಸರ್ವೆ ನಂ ಗೆ ಸಂಬಂಧಪಟ್ಟಂತೆ ದಾಖಲೆಗಳು ಅದಲು ಬದಲು ಆಗಿರುತ್ತದೆ ಎಂದರೆ ಸರ್ವೆ ನಂ 5, 6 ಎಂದು ನುಡಿಯುತ್ತಾರೆ. ಸರ್ವೆ ನಂ 17 ರಲ್ಲಿ ವಾದಿ ಸ್ವಾಧೀನ ಇರುತ್ತಾರೆ ಎಂದರೆ ಸರಿ. ಸದರಿ ಪಹಣಿಯನ್ನು ಹಾಜರುಪಡಿಸಿರುತ್ತೇನೆ. ವಾದಿ ಸ್ವಾಧೀನ ಇರುವ ಸರ್ವೆ ನಂ 5 ಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ. ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬಂದಿರುತ್ತಾರೆ ಎಂದು ಹೇಳಿದ್ದು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ವಾದಿ ಏನು ದಾಖಲೆ ಹಾಜರುಪಡಿಸಿರುತ್ತಾರೆ ಎಂದು ಗೊತ್ತಿಲ್ಲ. ವಾದಿಗೆ ದಾವಾ ಸ್ವತ್ತು ಮಂಜೂರಾಗುವ ಮೊದಲು ಸರ್ವೆ ನಂ 5 ರಲ್ಲಿ 5 ಎಕರೆ 29 ಗುಂಟೆ ಇತ್ತು. ಅದರಲ್ಲಿ 2 ಎಕರೆ 29 ಗುಂಟೆ

ಸಿದ್ದೇಗೌಡರವರಿಗೆ ಮಂಜೂರು ಆಗಿರುತ್ತದೆ. ಉಳಿದ 3 ಎಕರೆ ವಾದಿ ತಾಯಿಗೆ ಮಂಜೂರು ಆಗಿದೆ ಎಂದರೆ ಸರಿಯಲ್ಲ. ವಾದಿ ತಾಯಿಗೆ ಮಂಜೂರಾದ ದಾಖಲೆ ನೋಡಿಲ್ಲ ಮತ್ತು ಮಂಜೂರಾದ ವಿಷಯ ಗೊತ್ತಿಲ್ಲ. ವಾದಿ ದಾವಾ ಸ್ವತ್ತಿನ ಮೇಲೆ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. Tenancy ಅಡಿಯಲ್ಲಿ ವಾದಿ ತಾಯಿಗೆ ದಾವಾ ಸ್ವತ್ತು ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**